3.3.2

# ಅಭಿಜಾತ ಕನ್ನಡ

S.T.C. Arts and Commerce College
BANHATTI
587 311

ವಿದ್ವತ್ ಮಂಡಳಿಯಿಂದ ಪರಿಶೀಲನೆಗೊಂಡಿರುವ
ದ್ವೈಮಾಸಿಕ ಸಂಶೋಧನಾ ಪತ್ರಿಕೆ

# ABHIJATA KANNADA

Peer Reviewed Referred Journal with ISSN : 2347-4017

ರೆಫರೀಡ್ ಜರ್ನಲ್

ISSN-2347-4017 ಮಾರ್ಚ್ - ಏಪ್ರಿಲ್ 2021 ಸಂಪುಟ-7 ಸಂಚಿಕೆ -2
March – April 2021 Vol-7 Issue -2



ಪ್ರಧಾನ ಸಂಪಾದಕರು
ಪ್ರೊ. ಎಸ್. ಎಂ. ಗಂಗಾಧರಯ್ಯ

S.T.C. Arts and Commerce College
BANHATTI
587 311

*

# ಪರಿವಿಡಿ

೧. 'ಕರ್ನಾಟಕ ಕಲ್ಯಾಣಕಾರಕ'-ಕನ್ನಡದ ಮೊದಲ ವೈದ್ಯಶಾಸ್ತ್ರಕೃತಿ : ಒಂದು ಅವಲೋಕನ
❖ ಡಾ. ಕೊಟ್ರಸ್ವಾಮಿ. ಎ.ಎಂ.ಎಂ./ ೯

೨. ೨ನೆಯ ನಾಗವರ್ಮ ಮತ್ತು ಅಮರಸಿಂಹರ ಪೂರ್ವಾಪರ
❖ ರತ್ನಶ್ರೀ ಪುತಳೇಕರ / ೧೫

೩. ಕರ್ನಾಟಕ ಏಕೀಕರಣ ಚಳುವಳಿಯ ಸಾರ್ಥಕ ಕ್ಷಣಗಳು
❖ ಡಾ. ಬಸವರಾಜ ಕುಂಬಾರ / ೩೨

೪. ಬಿ. ಕೃಷ್ಣಪ್ಪನವರ ಕಥೆಗಳಲ್ಲಿ ರೈತಾಪಿ ಬದುಕಿನ ಚಿತ್ರಣ
❖ ಚಂದ್ರಶೇಖರ ಎಸ್.ಎಲ್. / ೩೭

೫. ವಚನಗಳಲ್ಲಿ ಅನುಭಾವ ಪರಿಕಲ್ಪನೆ
❖ ನರಸಣ್ಣವರ ಮಹಾಂತೇಶ ಬಸಪ್ಪ / ೪೩

೬. ಬಿ. ಕೃಷ್ಣಪ್ಪನವರ ಕಥೆಗಳಲ್ಲಿ ಕೌಟುಂಬಿಕ ಜೀವನ
❖ ಸಿಂಧು ಹೆಚ್.ಆರ್. / ೪೮

೭. ಶಿವಾನುಭವ ಪತ್ರಿಕೆ ಬೆಳೆದುಬಂದ ದಾರಿ
❖ ಸುರೇಶ ಪಿ. ನಡೋಣಿ / ೫೩

೮. ಕೋವಿಡ್ ೧೯ : ಸಮಸ್ಯೆಗಳು ಮತ್ತು ಸಾಮಾಜಿಕ ಸ್ವಾಸ್ಥ್ಯ
❖ ಲಕ್ಷ್ಮೀನಾರಾಯಣ ಹೆಚ್.ಎನ್. / ೬೧

೯. ನಿಜಗುಣ ಶಿವಯೋಗಿಗಳು : ಪ್ರತ್ಯಾವಲೋಕನ
❖ ಬಸವರಾಜ ಹಡಪದ / ೬೬

೧೦. ಖಗೇಂದ್ರಮಣಿ ದರ್ಪಣ : ಒಂದು ಅವಲೋಕನ
❖ ಪ್ರೊ. ಎಸ್.ಎಂ. ಗಂಗಾಧರಯ್ಯ / ೭೮

೧೧. ವಚನ ಸಾಹಿತ್ಯದಲ್ಲಿ ಮಹಿಳೆಯರ ಪ್ರತಿರೋಧದ ನೆಲೆಗಳು
❖ ಸವಿತಾ ಎಂ. ಬಿಜಕಲ್ / ೮೨

S.T.C. Arts and Commerce College BANHATTI 587 311

# ೭. ಶಿವಾನುಭವ ಪತ್ರಿಕೆ ಬೆಳೆದು ಬಂದ ದಾರಿ

❖

ಸುರೇಶ ಪಿ. ನಡೋಣಿ

ವಚನ ಸಾಹಿತ್ಯಕ್ಕೆ ಪುನರುಜ್ಜೀವನ ಕಲ್ಪಿಸಿಕೊಟ್ಟು ಅದರ ಅಳಿವು-ಉಳುವಿಗಾಗಿ ಹಗಲಿರುಳು ಶ್ರಮಿಸಿದ ಡಾ. ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರದು ಸಾರ್ಥಕ ಬದುಕು. ಏಕೆಂದರೆ ಕಾಲಗರ್ಭದಲ್ಲಿ ಸಿಕ್ಕು ನಾಶವಾಗುತ್ತಿದ್ದ ನುಶಿ ಗೆದ್ದಲು ಹೆಗ್ಗಣಗಳಿಗೆ ಆಹಾರವಾಗಿದ್ದ ಅಳಿದುಳಿದ ವಚನಸಾಹಿತ್ಯವನ್ನು ಹಳಕಟ್ಟಿಯವರು ಊರೂರು ಸುತ್ತಿ ಸಂಗ್ರಹಿಸಿ ಪರಿಷ್ಕರಿಸಿ ಪ್ರಕಟಿಸಿ ಅರವತ್ನಾಲ್ಕನೆಯ ಪುರಾತನರೆನಿಸಿದರು. ಅಲ್ಲದೆ ಶಿವಾನುಭವ ಪತ್ರಿಕೆ ಹಾಗೂ ನವಕರ್ನಾಟಕ ಪತ್ರಿಕೆಯನ್ನು ಪ್ರಾರಂಭಿಸಿ ಸಾಹಿತ್ಯ, ಭಾಷೆ, ಸಂಸ್ಕೃತಿ, ಧರ್ಮ ಹಾಗೂ ಸಾಮಾಜಿಕ ಸೇವೆಯ ಜೊತೆಗೆ ಜಾಗ್ರತೆಯನ್ನುಂಟುಮಾಡಿದ್ದು ಹಳಕಟ್ಟಿಯವರ ಜೀವಮಾನ ಸಾಧನೆಯಾಗಿದೆ. ಈ ನಿಟ್ಟಿನಲ್ಲಿ 'ಶಿವಾನುಭವ' ಪತ್ರಿಕೆ ಬೆಳೆದು ಬಂದ ದಾರಿಯ ವಿವಿಧ ಮಜಲುಗಳನ್ನು ಕುರಿತು ಅವಲೋಕಿಸೋಣ.

## ಶಿವಾನುಭವ ಪತ್ರಿಕೆಗೆ ಪ್ರಭಾವ ಮತ್ತು ಪ್ರೇರಣೆಗಳು

ಡಾ. ಫ ಗು ಹಳಕಟ್ಟಿಯವರು ಹುಟ್ಟುಹಾಕಿದ 'ಶಿವಾನುಭವ' ಪತ್ರಿಕೆಗೆ ಹಲವಾರು ಪ್ರಭಾವ ಪ್ರೇರಕ ಮತ್ತು ಪೂರಕ ಅಂಶಗಳು ಕಂಡು ಬರುತ್ತವೆ. ಅವುಗಳೆಂದರೆ ಮೊದಲನೆಯದಾಗಿ ಹಳಕಟ್ಟಿಯವರು ಧಾರವಾಡದ ಪ್ರೌಢಶಾಲೆಯೊಂದರಲ್ಲಿ ಕಲಿಯುತ್ತಿರುವ ಸಮಯದಲ್ಲಿ ಶಿಕ್ಷಕರೊಬ್ಬರು ವೀರಶೈವ

---

**ಸುರೇಶ ಪಿ. ನಡೋಣಿ** : ಸಂಶೋಧನಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಮಾರ್ಗದರ್ಶಕರು : ಡಾ. ಶೋಭಾ ಎಸ್ ನಾಯಕ**, ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

S.T.C. Arts and Commerce College BANHATTI 587 311

ಧರ್ಮ, ಸಮಾಜ, ಸಾಹಿತ್ಯ ಇತಿಹಾಸವನ್ನು ಕುರಿತು ಬಹಳ ತುಚ್ಛವಾಗಿ ನುಡಿದಿದ್ದು ಇದು ಹಳಕಟ್ಟಿಯವರ ಮನಸ್ಸಿನ ಮೇಲೆ ಬಹಳ ಗಾಢವಾದ ಪ್ರಭಾವ ಬೀರಿತು.

ಬೆಳೆಯುವ ಸಿರಿ ಮೊಳಕೆಯಲ್ಲಿ -ಎನ್ನುವಂತೆ ಮುಂದೆ ಶಿವಾನುಭವ ಪತ್ರಿಕೆಯನ್ನು ಹುಟ್ಟು ಹಾಕಿ ಅದರ ಮುಖೇನವೇ ವಚನವಾಙ್ಮಯವನ್ನು ಸಂಶೋಧಿಸಿ ಪರಿಷ್ಕರಿಸಿ ಪ್ರಕಟಿಸಿದರು. ಎರಡನೆಯದಾಗಿ ಮಾವನವರಾದ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರು ಅಳಿಯನಾದ ಹಳಕಟ್ಟಿಯವರಿಗೆ ಬರೆದ ಪತ್ರಗಳು. ಈ ಪತ್ರಗಳಲ್ಲಿ ಹಳಕಟ್ಟಿಯವರ ಆರೋಗ್ಯ ಮತ್ತು ಯೋಗಕ್ಷೇಮಕ್ಕಿಂತ ಅಂದಿನ ಕಾಲಘಟ್ಟದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಜ್ಞಾನವನ್ನು ಒದಗಿಸುವಂತಹ ವರ್ತಮಾನಗಳೇ ಹೆಚ್ಚಾಗಿದ್ದವು. ಅಂದು ಪತ್ರಿಕೆಗಳು, ಪುಸ್ತಕಗಳು ಹಾಗೂ ಲೇಖನಗಳ ಸಂಖ್ಯೆ ಬಹಳ ವಿರಳವಾಗಿರುತ್ತಿತ್ತು. ಆದುದರಿಂದ ಸದ್ಯಕ್ಕೆ ವಿಜಯಪುರ(ವಿಜಾಪುರ)ದ ಭಾಗಕ್ಕೆ ಪತ್ರಿಕೆಯ ಕೊರತೆಯನ್ನು ನೀಗಿಸುವಂತಹ ಒಂದು ಉತ್ತಮ ವರ್ತಮಾನ ಪತ್ರಿಕೆಯು ಅವಶ್ಯಕವೂ, ಅನಿವಾರ್ಯವೂ, ಇದೆಯೆಂದು ಬರೆಯುತ್ತಿದ್ದರು. ಮಾವ ತಮ್ಮಣ್ಣಪ್ಪ ಚಿಕ್ಕೋಡಿಯವರ ಈ ಪತ್ರಬರವಣಿಗೆಯ ಆತ್ಮಿಯ ಸಲಹೆ ಸೂಚನೆಗಳು ಮುಂದೆ ಹಳಕಟ್ಟಿಯವರಿಗೆ 'ಶಿವಾನುಭವ' ಪತ್ರಿಕೆ ಪ್ರಾರಂಭಿಸಲು ಪ್ರೇರಕ ಮತ್ತು ಪೂರಕ ಶಕ್ತಿಯಾಗಿ ಪರಿಣಮಿಸಿತು. ಮೂರನೆಯದಾಗಿ ೧೯೨೧ ರಲ್ಲಿ 'ವಚನಶಾಸ್ತ್ರಸಾರ ಭಾಗ-೧' ಎಂಬ ಗ್ರಂಥವನ್ನು ಡಾ. ಫಕೀರಪ್ಪ ಹಳಕಟ್ಟಿಯವರು ಸಿದ್ಧಪಡಿಸಿ ಅಚ್ಚುಹಾಕಿಸಲು ಮುಂಗಡವಾಗಿ ೫೦೦ ರೂಪಾಯಿಗಳನ್ನು ಕೊಟ್ಟು ಮಂಗಳೂರಿನ ಬಾಷಲ್ ಮಿಷನ್ ಪ್ರೆಸ್ಸಿಗೆ ಕಳುಹಿಸಿದರು ಆದರೆ ಪ್ರೆಸ್ಸಿನವರು,

"ಪರಧರ್ಮದವರ ಗ್ರಂಥಗಳನ್ನು ನಾವು ಅಚ್ಚು ಹಾಕುವುದಿಲ್ಲ. ಮತ್ತು ನಿಮ್ಮ ಗ್ರಂಥದಲ್ಲಿ ಪರಮಾತ್ಮನ ಸಂಬಂಧವಾಗಿ ಇರುವ ವಿಚಾರಗಳನ್ನು ಪ್ರಕಾಶಪಡಿಸಲು ನಾವು ಇಷ್ಟಪಡುವುದಿಲ್ಲ. ಅವು ನಮ್ಮ ಕ್ರಿಶ್ಚನ್ ಧರ್ಮ ತತ್ವಗಳನ್ನು ಹೋಲುತ್ತವೆ. ಇಂತಹ ಧಾರ್ಮಿಕ ಗ್ರಂಥಗಳನ್ನು ಅಚ್ಚು ಹಾಕುವುದರಿಂದ ನಮ್ಮ ಮಿಶನ್ನಿನ ಉದ್ದೇಶಕ್ಕೆ ಭಂಗಬರುತ್ತದೆ"[೧]

-ಎಂದು ಹೇಳಿ ಮುಂಗಡವಾಗಿ ಪಡೆದ ೫೦೦ ರೂಪಾಯಿಗಳನ್ನು ಮತ್ತು ಗ್ರಂಥವನ್ನು ಮರಳಿ ಕಳುಹಿಸಿದರು. ಆದರೂ ಹಳಕಟ್ಟಿಯವರು ಇದರಿಂದ ವಿಚಲಿತರಾಗದೆ ಉತ್ಕಟ ಅಭಿಮಾನವನ್ನು ತುಂಬಿಕೊಂಡು ತಮ್ಮ ಸ್ವಂತ ಮನೆಯನ್ನು ಮಾರಿ ೧೯೨೫ ರಲ್ಲಿ 'ಹಿತಚಿಂತಕ' ಎಂಬ ಮುದ್ರಣಾಲಯವನ್ನು ಸ್ಥಾಪಿಸಿ ಅದರ ಮೂಲಕವೇ 'ಶಿವಾನುಭವ' ಪತ್ರಿಕೆಯನ್ನು ಹೊರಡಿಸಿದರು. ಸಮಕಾಲೀನ ಪತ್ರಿಕೆಗಳಾದ 'ಕರ್ನಾಟಕ ಕಾವ್ಯ ಮಂಜರಿ', 'ವೀರಶೈವ ಮತ ಪ್ರಕಾಶಿಕಾ',

S.T.C. Arts and Commerce College BANHATTI 587 311

'ಧರ್ಮತರಂಗಿಣಿ', 'ಪ್ರಬೋಧ', 'ವೀರಶೈವ ಗ್ರಂಥಪ್ರಕಾಶಿಕಾ' ಮುಂತಾದ ಪತ್ರಿಕೆಗಳು 'ಶಿವಾನುಭವ ಪತ್ರಿಕೆಗೆ' ಪರೋಕ್ಷವಾಗಿ ಅಪರೋಕ್ಷವಾಗಿ ಪ್ರೇರಣೆ ನೀಡಿದ್ದು ಸಹಜವಾಗಿ ಮತ್ತು ಪೂರಕವಾಗಿ ಕಂಡು ಬರುತ್ತದೆ. "ಹೀಗೆ ಫ ಗು ಹಳಕಟ್ಟಿಯವರು ಪತ್ರಿಕೆಯನ್ನು ಪ್ರಾರಂಭಿಸುವುದಕ್ಕಿಂತ ಮೊದಲು ಮೇಲೆ ಪ್ರಸ್ತಾಪಿಸಿದ ಕೆಲವು ಪ್ರಮುಖ ಪತ್ರಿಕೆಗಳು ಶಿವಾನುಭವ ಪತ್ರಿಕೆಯ ಮಾದರಿಯಲ್ಲಿ ಕಾರ್ಯನಿರ್ವಹಿಸಿವೆ"[೨] ಒಟ್ಟಿನಲ್ಲಿ ಅಂದಿನ ಕಾಲಘಟ್ಟದ ಪತ್ರಿಕೆಗಳ ಪ್ರಭಾವ ಪ್ರೇರಣೆಯಿಂದ ಶಿವಾನುಭವ ಪತ್ರಿಕೆ ಜನ್ಮ ತಳೆಯಿತು.

**ಶಿವಾನುಭವ ಪತ್ರಿಕೆ ಬೆಳೆದು ಬಂದ ದಾರಿ**

'ಜನಸೇವೆಯೇ ಜನಾರ್ಧನ ಸೇವೆ –ಎಂಬ ನಾಣ್ಣುಡಿಯಂತೆ ಡಾ. ಫ ಗು ಹಳಕಟ್ಟಿಯವರು ಸಮಾಜ ಸೇವೆಗಾಗಿ ತಮ್ಮ ಜೀವನವನ್ನು ಸವೆಸಿದರು. ಅದರಲ್ಲೂ ಪತ್ರಿಕೋದ್ಯಮದಲ್ಲಿ ಬಹಳ ಆಸಕ್ತಿ ಹೊಂದಿದ್ದ ಇವರು ಫೆಬ್ರುವರಿ ೧೯೨೬ ರಲ್ಲಿ 'ಶಿವಾನುಭವ' ಪತ್ರಿಕೆಯನ್ನು ಪ್ರಾರಂಭಿಸಿದರು. ವಚನವಾಙ್ಮಯ ಸಂಶೋಧನೆಗಾಗಿ ಮೀಸಲಾದ ಶಿವಾನುಭವ ಪತ್ರಿಕೆಯನ್ನೇ ರಂಗಸ್ಥಲ ಮಾಡಿಕೊಂಡು ವಚನ ಗುಮ್ಮಟವನ್ನು ಕಟ್ಟುವ ಕಟ್ಟಾಳಾಗಿ ಹಗಲು ರಾತ್ರಿಯೆನ್ನದೇ ದುಡಿದು ವಚನಶಾಸ್ತ್ರದ ಪಿತಾಮಹರೆನಿಸಿಕೊಂಡರು. ಸುಮಾರು ೩೫ ವರ್ಷಗಳ ಸುದೀರ್ಘ ಇತಿಹಾಸವುಳ್ಳ ಶಿವಾನುಭವ ಪತ್ರಿಕೆಯು ೧೯೫೧ ರಲ್ಲಿ ತನ್ನ ಬೆಳ್ಳಿಹಬ್ಬವನ್ನು ಆಚರಿಸಿಕೊಂಡಿತು.

ಸಂಶೋಧನೆಗಾಗಿ ಮೀಸಲಾದ 'ಶಿವಾನುಭವ' ಪತ್ರಿಕೆಯು ತನ್ನದೇಯಾದ ಗುರಿ ಉದ್ಧೇಶಗಳನ್ನು ಇಟ್ಟುಕೊಂಡು ಫೆಬ್ರವರಿ ೧೯೨೬ ರಲ್ಲಿ ಪ್ರಕಟಗೊಂಡಿತು. ಡಿಸೆಂಬರ ೧೯೨೮ ರವರೆಗೆ ತ್ರೈಮಾಸಿಕವಾಗಿ ಬೆಳೆದು ಈ ಪತ್ರಿಕೆ ಕೆಲವೇ ವರ್ಷಗಳಲ್ಲಿ ಜನರ ಹಾಗೂ ವಾಚಕರ ಪ್ರೀತಿ ವಿಶ್ವಾಸ ಗಳಿಸಿತು. ವಾಚಿಕರ ಆಸಕ್ತಿ ಮತ್ತು ಆಗ್ರಹದ ಮೇರೆಗೆ ಏಪ್ರಿಲ್ ೧೯೨೯ ರಿಂದ ಎಪ್ರಿಲ್ ೧೯೩೧ ರವರೆಗೆ ಮಾಸಿಕ ಪತ್ರಿಕೆಯಾಗಿ ಪ್ರಕಟಿಸಲಾಯಿತು.

ಹಳಕಟ್ಟಿಯವರು ಎಷ್ಟೇ ಭಕ್ತಿ ಶ್ರದ್ಧೆಯಿಂದ ದುಡಿದರೂ ಹಲವಾರು ಕಾರಣಗಳಿಂದ ಕೆಲವು ಅನನೂಕೂಲತೆಯಿಂದ ಹಾಗೂ ಆರ್ಥಿಕ ಮುಗ್ಗಟ್ಟಿನಿಂದ ಜನವರಿ ೧೯೩೬ ರವರೆಗೆ ದ್ವೈಮಾಸಿಕವಾಗಿ ಪ್ರಕಟಗೊಂಡಿತು. ಮತ್ತೆ ಓದುಗರ ಕೋರಿಕೆ, ಅಗ್ರಹ ವಾಚಕರ ಪ್ರೀತಿ ವಿಶ್ವಾಸಗಳಿಂದಾಗಿ ಫೆಬ್ರವರಿ ೧೯೩೭ ರಿಂದ ೧೯೬೧ ರವರೆಗೆ ಮಾಸಿಕ ಪತ್ರಿಕೆಯಾಗಿ ಪ್ರಕಟಿಸಲ್ಪಟ್ಟಿತು. ಹೀಗೆ ಸುಮಾರು ಮೂವತ್ತೈದು ವರುಷಗಳ ಸುದೀರ್ಘ ಇತಿಹಾಸವನ್ನು ಹೊಂದಿದ ಶಿವಾನುಭವ ಪತ್ರಿಕೆಯು ಹಲವಾರು ಏಳುಬೀಳುಗಳೊಡನೆ ಬೆಳೆದು ಬಂದದ್ದು ಒಂದು ಗಮನಾರ್ಹ ಸಂಗತಿಯಾಗಿದೆ.

S.T.C. Arts and Commerce College ★ BANHATTI 587 311

**ಶಿವಾನುಭವ ಪತ್ರಿಕೆಯಲ್ಲುಂಟಾದ ಪಲ್ಲಟಗಳು**

'ಶಿವಾನುಭವ' ಪತ್ರಿಕೆಯು ನಡೆದು ಬಂದ ದಾರಿಯು ಗುರುತರವಾದದ್ದು ಆದಾಗ್ಯೂ ಹಲವು ಬದಲಾವಣೆಗಳನ್ನು, ಕಾರಣಗಳನ್ನು ಕಾಣಬಹುದು. "ಈ ಪತ್ರಿಕೆಯನ್ನು ಪ್ರತಿ ತಿಂಗಳು ಪ್ರಕಟಿಸಿದ್ದಾದರೆ ಜನರಲ್ಲಿ ಹೆಚ್ಚು ಉತ್ಸುಕತೆಯೂ ಜಾಗ್ರತೆಯೂ ಉತ್ಪನ್ನವಾಗಿ ಅದರಿಂದ ಹೆಚ್ಚಿಗೆ ಉಪಯೋಗವಾಗಬಹುದೆಂದು ಅನೇಕರು ಸೂಚಿಸಿದ್ದರಿಂದ ನಾವು ಇದನ್ನು ಮಾಸ ಪತ್ರಿಕೆಯನ್ನಾಗಿ ಮಾಡಿದ್ದೇವೆ"[೬] -ಹೀಗೆ ಶಿವಾನುಭವ ಪತ್ರಿಕೆಯು ಸುಮಾರು ಎರಡು ವರುಷಗಳವರೆಗೆ ಮಾಸಪತ್ರಿಕೆಯಾಗಿ ಪ್ರಕಟಗೊಂಡು ಜನಮೆಚ್ಚುಗೆ ಪಡೆಯಿತು. ನಂತರ ಓದುಗರ ಆಸಕ್ತಿ ಪತ್ರಿಕೆಯ ವಿವಿಧ್ವತ್ವ ಉಪಯುಕ್ತತೆ ಹಾಗೂ ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ೬೪ ಪುಟಗಳಲ್ಲಿ ಪ್ರಕಟವಾಗೊಳ್ಳುತ್ತಿದ್ದ ಶಿವಾನುಭವ ಪತ್ರಿಕೆಯನ್ನು ೧೨೮ ಪುಟಗಳಿಗೆ ವಿಸ್ತರಿಸಿ ದ್ವೈಮಾಸಿಕ ಪತ್ರಿಕೆಯನ್ನಾಗಿ ಮಾರ್ಪಡಿಸಿ ಪ್ರಕಟಿಸಿದರು.

ಶಿವಾನುಭವ ಪತ್ರಿಕೆಯು ಪ್ರಾರಂಭದಿಂದಲೂ ಆರ್ಥಿಕ ಮುಗ್ಗಟ್ಟನ್ನು ಅನುಭವಿಸುತ್ತ ಬೆಳೆದು ಬಂದ ಪತ್ರಿಕೆಯಾಗಿದೆ ಅದನ್ನು ಹಳಕಟ್ಟಿಯವರು ಈ ರೀತಿ ವ್ಯಕ್ತಪಡಿಸಿದ್ದಾರೆ. "ಶಿವಾನುಭವವು ವೀರಶೈವ ಸಮಾಜದ ಯೋಗ್ಯತೆಯನ್ನು ಎತ್ತರಿಸಿದ ಪತ್ರಿಕೆ ಎಂದು ಭಾವಿಸಿ ಅದಕ್ಕೋಸ್ಕರ ಪ್ರೀತಿಯನ್ನು ವಹಿಸಿ ಇದನ್ನು ಪೋಷಿಸಬೇಕೆಂದು ನಾವು ಸವಿನಯಪೂರ್ವಕವಾಗಿ ವಾಚಕರಲ್ಲಿ ವಿಜ್ಞಾಪಿಸಿಕೊಳ್ಳುತ್ತೇವೆ. ಈ ಪತ್ರಿಕೆಯ ಸಾಂಪತ್ತಿಕ ಸ್ಥಿತಿಯು ಅತ್ಯಂತ ಅಸಮಾಧಾನಕರ ಸ್ಥಿತಿಯಲ್ಲಿದೆ ಎಂದು ತಮಗೆ ತಿಳಿಸಲು ನಾವು ವಿಷಾದಗೊಳ್ಳುತ್ತೇವೆ"[೭] ಈ ತೆರನಾದ ಆರ್ಥಿಕ ತೊಂದರೆಯನ್ನು ಪತ್ರಿಕೆಯು ಅನುಭವಿಸಿತು ಆದರೂ ತನ್ನ ಗುರಿ ಧ್ಯೇಯ ಉದ್ದೇಶಗಳಿಂದ ಹಿಂದೆ ಸರಿಯಲಿಲ್ಲ.

**ಶಿವಾನುಭವ ಪತ್ರಿಕೆಯ ಲೇಖಕರು**

ಶಿವಾನುಭವ ಪತ್ರಿಕೆಯು ಗುರುತರವಾಗಿ ಬೆಳೆದು ಬಂದಿದ್ದರೂ ಸಮಕಾಲೀನ ಕಾಲಘಟ್ಟದ ಸಂದರ್ಭದಲ್ಲಿ ಈ ಪತ್ರಿಕೆಗೆ ಸುಮಾರು ೨೫೦ ಕ್ಕಿಂತಲೂ ಹೆಚ್ಚು ಜನ ಲೇಖಕರು ವಿದ್ವಾಂಸರು ತಮ್ಮ ಸಂಶೋಧನಾತ್ಮಕ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. "ರಾಜ್ಯದ ಪ್ರಸಿದ್ಧ ಕೆಲ ಘನವಿದ್ವಾಂಸರಿಂದ ಪತ್ರಿಕೆ ಬೆಳೆದಿದ್ದರೆ ಇನ್ನೂ ಕೆಲವರನ್ನು ಪತ್ರಿಕೆ ಬೆಳೆಸಿದೆ"[೮] ಶಿವಾನುಭವ ಪತ್ರಿಕೆಯಲ್ಲಿ ನಾಡಿನ ಎಲ್ಲ ಕಡೆಯಿಂದಲೂ ಲೇಖಕರ ಮೌಲೀಕವಾದ ಬೆಲೆಯುಳ್ಳ ಲೇಖನಗಳು ಪ್ರಕಟಗೊಂಡಿವೆ.

–ಅವುಗಳಲ್ಲಿ ಪ್ರಮುಖರಾದವರೆಂದರೆ – ಶಿವಾನಂದ ಸ್ವಾಮಿ ಗವಿಮಠ (ತೆಗ್ಗಿನ ಹಳ್ಳ), ಸಿಂಪಿ ಲಿಂಗಣ್ಣ, ಕೆ.ಜಿ. ಕುಂದಣಗಾರ, ಬ ಚ ಪಟ್ಟೇದ, ಆರ್ ಸಿ

S.T.C. Arts and Commerce College BANHATTI 587 311

ಹಿರೇಮಠ, ಸ ಸ ಮಾಳವಾಡ, ಚಂದ್ರಶೇಖರ ಕಂಬಾರ, ವೀರಭದ್ರಪ್ಪ, ಹರ್ಡೆಕರ ಮಂಜಪ್ಪ, ಬಂಥನಾಳ ಶಿವಯೋಗಿ, ಮಹಾಂತದೇವರು(ಇಳಕಲ್ಲ), ಮುಂತಾದವರು.

**ಶಿವಾನುಭವ ಪತ್ರಿಕೆಯ ಸಂಪಾದಕೀಯ**

ಸಂಪಾದಕೀಯ ಬರವಣಿಗೆಯನ್ನು ಪತ್ರಿಕೆಯ ಮುಖವಾಣಿವೆಂತಲೂ, ಪತ್ರಿಕೆಯ ನಿರ್ಣಾಯಕ ಧ್ವನಿ ಎಂತಲೂ, ಪತ್ರಿಕೆಯ ಹೃದಯ ಭಾಗವೆಂತಲೂ ಕರೆಯುತ್ತಾರೆ. ಆದುದರಿಂದ ಶಿವಾನುಭವ ಪತ್ರಕೆಯ ಸಂಪಾದಕರು ಸಮಕಾಲೀನ ಮಹತ್ವದ ಮೌಲ್ಯಯುತ ಘಟನೆಗಳನ್ನು ಆಯಾ ಕಾಲಘಟ್ಟದ ಸಾಂದರ್ಭಿಕ ವಿಷಯಗಳನ್ನು ಓದುಗರ ಮುಂದಿಟ್ಟು ವೈಚಾರಿಕವಾಗಿ ಆಲೋಚಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಹೀಗಾಗಿ ಪತ್ರಿಕೆಯ ಸಂಪಾದಕೀಯ ಬರವಣಿಗೆಗೆ ಅತೀ ಹೆಚ್ಚಿನ ಮಹತ್ವವಿದೆ. ಈ ನಿಟ್ಟಿನಲ್ಲಿ ಪತ್ರಿಕೆಯ ಗುರಿ ಉದ್ಧೇಶಗಳು, ತಾತ್ವಿಕ ಚಿಂತನೆಗಳು, ವೈಚಾರಿಕ ನೆಲೆಗಳು, ಸಮಕಾಲೀನ ಸಾಮಾಜಿಕ ಸವಾಲುಗಳನ್ನೂ, ಸಂಪಾದಕೀಯ ಬರವಣಿಗೆಯನ್ನು ಪ್ರತಿನಿಧಿಸಿ ಪತ್ರಿಕೆಗೆ ಗಟ್ಟಿತನವನ್ನು ತಂದುಕೊಟ್ಟಿದೆ. "ಶಿವಾನುಭವ ಪತ್ರಿಕೆಯು ಕೇವಲ ಸಂಶೋಧನೆಯ ಕಾರ್ಯಕ್ಕೋಸ್ಕರ ಉಂಟಾದದ್ದು ಇದೆ. ಈ ದೃಷ್ಟಿಯಿಂದ ಬರೆದ ಲೇಖನಗಳಿಗೆಲ್ಲ ನಾವು ಅದರಲ್ಲಿ ಇಂಬುಗೊಡುತ್ತಾ ಬಂದಿದ್ದೇವೆ"

**ಶಿವಾನುಭವ ಪತ್ರಿಕೆಯಲ್ಲಿ ಬಂದ ಕೆಲವು ಆಯ್ದ ಲೇಖನಗಳು**

ಶಿವಾನುಭವ ಪತ್ರಿಕೆಯಲ್ಲಿ ಹಲವಾರು ಲೇಖನಗಳು ಪ್ರಕಟಗೊಂಡಿದ್ದು ಅವುಗಳಲ್ಲಿ ಆಯ್ದ ಕೆಲವು ಪ್ರಮುಖ ಲೇಖನಗಳ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ.

**ವಚನವಾಙ್ಮಯಕ್ಕೆ ಸಂಬಂಧಿಸಿದ ಲೇಖನಗಳು**

| ಲೇಖನ | ಲೇಖಕರು | ಸಂಪುಟ | ಸಂಚಿಕೆ |
|---|---|---|---|
| ೧. ಬಸವಣ್ಣನವರ ಸಾಮಾಜಿಕ ವಿಚಾರಗಳು | ಕೆ.ಜಿ.ಕುಂದಣಗಾರ | ೧೦ | ೬ |
| ೨ ವಚನ ವಾಙ್ಮಯ | ಎಸ್.ಸಿ.ನಂದಿಮಠ | ೧೪ | ೬ |
| ೩ ವಚನ ಸಾಹಿತ್ಯ | ಮ.ಮಲ್ಲಪ್ಪ ಹುಲಗೂರ | ೨೧ | ೪ |
| ೪ ಆದ್ಯರ ವಚನ | ಎನ್.ಆರ್.ದೇಸಾಯಿ | ೨೭ | ೨ |

**ಐತಿಹಾಸಿಕ ಲೇಖನಗಳು**

| | | | |
|---|---|---|---|
| ೧ ದೇವರ ದಾಸಿಮಯ್ಯ | ಸಿ.ನಾ.ಮಹಾಂತನ್ನವರ | ೨ | ೮ |
| ೨ ಮಹಾದೇವಿಯಕ್ಕನವರ ಮದುವೆ ಆಗಿದೆಯೇ? | ಚಂದ್ರಶೇಖರ ಆಡ್ನೂರ | ೧೧ | ೮ |

S.T.C. Arts and Commerce College BANHATTI 587 311

| | | | | |
|---|---|---|---|---|
| ೩ | ಸೊನ್ನಲಿಗೆಯ ಸಿದ್ಧರಾಮ ಶೈವನೇ? | ಆರ್.ಸಿ.ಹಿರೇಮಠ | ೨೦ | ೮ |
| ೪ | ಬಸಣ್ಣನವರ ಸಂಸಾರ | ಸಿಂಪಿ ಲಿಂಗಣ್ಣ | ೨೪ | ೧,೩,೪ |
| **ವೀರಶೈವ ಧರ್ಮಕ್ಕೆ ಸಂಬಂಧಿಸಿದ ಲೇಖನಗಳು** | | | | |
| ೧ | ಶಿವಾನುಭವವೆಂದರೇನು? | ಸಿಂಪಿ ಲಿಂಗಣ್ಣ | ೧೭ | |
| ೨ | ಸ್ಥಾವರ ಲಿಂಗಗಳು | ಸೀನಾ ಮಹಾಂತನ್ನವರ | ೨೦ | ೨ |
| ೩ | ಶಿವಯೋಗ ಸಮಾಧಿ | ಬ.ಚ. ಪಟ್ಟದ | ೨೨ | ೯ |
| ೪ | ಭಕ್ತಿ ಯೋಗ | ಸಂ.ಶಿವಯೋಗಿಗಳು | ೨೮ | ೧೧, ೮ |
| **ಶಿವಾನುಭವ ಸಂಘಟನೆಗೆ ಸೇರಿದ ಲೇಖನಗಳು** | | | | |
| ೧ | ಶಿವಾನುಭವ ಸಂಸ್ಥೆಯ ವಿಧಾಯಕ ಕಾರ್ಯಗಳು | ಕಲ್ಯಾಣಪ್ಪ ಬ್ಯಾಳಿ | ೨೨ | ೬ |
| ೨ | ಶಿವಾನುಭವ ಪಾಠಪ್ರವಚನ ಮಾಲೆಯ ಕಾರ್ಯಕಲಾಪಗಳ ವಿವರಣೆ | ಈ.ಶಿ. ಉಮರಾಣಿ | ೨೬ | ೧೦ |
| ೩ | ಅಕ್ಕನ ಬಳಗ | ಸೀನಾ ಮಹಾಂತನ್ನವರ | ೨೮ | ೪ |
| ೪ | ಅಕ್ಕನಬಳಗಗಳ ಸಂಘಟನೆ ಮತ್ತು ಕಾರ್ಯಕ್ಷೇತ್ರ | ಅನ್ನದಾನೇಶ್ವರವಿರಕ್ತಮಠ | ೩೧ | ೨ |
| **ಸಂಕೀರ್ಣ ಲೇಖನಗಳು** | | | | |
| ೧ | ತಾಂಡವ ನೃತ್ಯ | ಮಡಿವಾಳಪ್ಪ ಮಿಣಜಗಿ | ೧ | ೪ |
| ೨ | ಜಾತೀಯತೆಯ ಭೂತ | ಕಲ್ಯಾಣಪ್ಪ ಬ್ಯಾಳಿ | ೨೨ | ೭ |
| ೩ | ಸತ್ಯಮೇವ ಜಯತೇ | ಸಂ. ಶಿವಯೋಗಿಗಳು | ೨೫ | ೯ |
| ೪ | ಸುಖದ ನೇಲೆವಿಡು | ಸಿಂಪಿ ಲಿಂಗಣ್ಣ | ೩೧ | ೪,೫ |

## ಶಿವಾನುಭವ ಪತ್ರಿಕೆಯ ವೈಶಿಷ್ಟ್ಯಗಳು

'ಶಿವಾನುಭವ' ಪತ್ರಿಕೆಯು ತನ್ನದೆ ಆದ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ – ಇದು ಕೇವಲ ವಿಜಯಪುರ(ವಿಜಾಪುರ) ಜಿಲ್ಲೆಗೆ ಮಾತ್ರ ಸಿಮಿತವಾಗಿರದೆ ಕಲಬುರ್ಗಿ, ಬಳ್ಳಾರಿ, ಹೊಸಪೇಟೆ, ಧಾರವಾಡ, ಹುಬ್ಬಳ್ಳಿ, ದಾವಣಗೆರೆ, ಮೈಸೂರು, ಬೆಂಗಳೂರು –ಹೀಗೆ ನಾಡಿನಾದ್ಯಂತ ಚಂದಾದಾರರನ್ನು ಹಾಗೂ ಲೇಖಕರ ಅತೀ ದೊಡ್ಡ ಬಳಗವನ್ನು ಹೊಂದಿತ್ತು. ಇದರ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರಾರಂಭದಿಂದಲೂ ಆರ್ಥಿಕ ಮುಗ್ಗಟ್ಟನ್ನು ಅನುಭವಿಸಿದರೂ ಕೂಡ ಓದುಗರಿಗೆ ಹೊರೆಯಾಗಬಾರದೆಂದು ಪತ್ರಿಕೆಯ ಚಂದಾ

S.T.C. Arts and Commerce College BANHATTI 587 311

ಹಣವನ್ನು ಹೆಚ್ಚಿಸದೇ ಬೆಲೆಯಲ್ಲಿ ಸಮತೋಲನ ಕಾಯ್ದುಕೊಂಡಿದ್ದು ಹಾಗೂ ಪತ್ರಿಕೋದ್ಯಮ ಒಂದು ಉದ್ಯಮವಾಗಿ ಬೆಳೆಯದಿದ್ದ ಕಾಲಘಟ್ಟದಲ್ಲಿ ಓದುಗರ ಕೊರತೆ ಇದ್ದಾಗಲೂ ಸುಮಾರು ಮುವತ್ತೈದು ವರುಷಗಳವರೆಗೆ ಪ್ರಕಟಗೊಳ್ಳುತ್ತ ಬಂದಿದ್ದು ಒಂದು ವಿಶೇಷ ಸಂಗತಿಯಾಗಿದೆ. ಅಲ್ಲದೆ ಸಂಶೋಧನೆಗೆ ಮೀಸಲಾದ ಶಿವಾನುಭವ ಪತ್ರಿಕೆಯು ಪ್ರಾರಂಭದಿಂದಲೂ ಕೊನೆಯವರೆಗೆ ತನ್ನ ಧ್ಯೇಯ ಧೋರಣೆಗಳಲ್ಲಿ ಬದಲಾವಣೆ ಮಾಡಿಕೊಳ್ಳದೆ ಮೂಲ ಗುರಿ ಉದ್ದೇಶಗಳಿಗೆ ಬದ್ಧವಾಗಿದ್ದು, ಆಧುನಿಕ ಪತ್ರಿಕೆಗಳನ್ನು ನಾಚಿಸುವಂತಿತ್ತು. ಶಿವಾನುಭವ ಪತ್ರಿಕೆ ಕುರಿತು ಡಾ. ಎಂ ಎಂ ಕಲಬುರ್ಗಿಯವರು "ಶಿವಾನುಭವ ಕರ್ನಾಟಕದ ಇತಿಹಾಸದಲ್ಲಿ ಕೇವಲ ಒಂದು ಪತ್ರಿಕೆಯಲ್ಲ, ಆಂಗ್ಲ ವಿದ್ಯಾಭ್ಯಾಸದಿಂದಾಗಿ ಹೊಸ ತಿರುವು ಪಡೆಯುತ್ತಲಿದ್ದ ವೀರಶೈವ ಸಮಾಜದ ಇತಿಹಾಸವನ್ನು ಶೋಧಿಸಿ, ಅದರ ವರ್ತಮಾನವನ್ನು ರೂಪಿಸಿದ ಒಂದು ದೊಡ್ಡ ಶಕ್ತಿ. ಇದು ಜಾಹೀರಾತು ಮೊದಲಾದ ಲಾಭಗಳ ಬೆನ್ನು ಹತ್ತದೆ, ಪ್ರಚೋದಕ ವಿಷಯ ಬೆರಸಿ ಪ್ರಚಾರದ ದುರಾಶೆಗೆ ಬೀಳದೆ, ಪತ್ರಿಕಾ ಧರ್ಮದ ಪರಿಶುದ್ಧಿಯನ್ನು ವ್ರತವೆಂಬತೆ ಪಾಲಿಸಿ, ಮೂರುವರೆ ದಶಕಗಳ ತನ್ನ ಜೀವಮಾನದಲ್ಲಿ ಆರ್ಥಿಕ ಮುಗ್ಗಟ್ಟನ್ನು ಅನುಭವಿಸುತ್ತಲೇ ಸಮಾಜದ ಶ್ರೇಯಸ್ಸಿಗಾಗಿ ಶ್ರಮಿಸಿತು. ವೀರಶೈವ ಪತ್ರಿಕಾ ಪ್ರಪಂಚದಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ದುಡಿಯಿತು."[೭] ಈ ರೀತಿಯಾಗಿ ಅನೇಕ ಪಂಡಿತರು, ಸಹೃದಯರು ಪತ್ರಿಕೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಶಿವಾನುಭವ ಪತ್ರಿಕೆಯು ಪ್ರಾರಂಭದಿಂದಲೂ ಆರ್ಥಿಕ ಮುಗ್ಗಟ್ಟನ್ನು ಅನುಭವಿಸಿದರೂ ಕೂಡ ಅಂದಿನ ಕಾಲಘಟ್ಟದಲ್ಲಿ ಜನ ಮನ್ನಣೆ ಪಡೆದು ಸಮಕಾಲೀನ ಪತ್ರಿಕೆಗಳನ್ನು ಮೀರಿ ಹೂವಿನ ಕುಸುಮ, ಪರಿಮಳ ಬೀರುವಂತೆ ತನ್ನ ಪ್ರಭಾವವನ್ನು ಕನ್ನಡ ನಾಡಿನಾದ್ಯಂತ ಬೀರಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ.

### ಅಡಿಟಿಪ್ಪಣಿಗಳು

೧. ಶಿವಾನುಭವ ಸಂಪುಟ –೨೫, ಸಂಚಿಕೆ –೧೨, ಪು. ಸಂ. ೪೨೯

೨. ಡಾ. ಎಂ.ಬಿ. ಪಾಟೀಲ : ವಚನಗುಮ್ಮಟ, ಸಂಶೋಧನಾ ಮಹಾಪ್ರಬಂಧ, ಪು. ಸಂಖ್ಯೆ ೨೩೧

೩. ಶಿವಾನುಭವ ಸಂಪುಟ –೪, ಸಂಚಿಕೆ –೧, ಪು. ಸಂ. ೬೨

೪. ಶಿವಾನುಭವ ಸಂಪುಟ –೧೦, ಸಂಚಿಕೆ –೬, ಪು. ಸಂ. ೫೬೪

೫. ಡಾ. ಎಂ.ಬಿ. ಪಾಟೀಲ : ವಚನಗುಮ್ಮಟ, ಸಂಶೋಧನಾ ಮಹಾಪ್ರಬಂಧ, ಹಿತಚಿಂತಕ ಪ್ರಕಾಶನ, ಪು. ಸಂಖ್ಯೆ ೨೩೫

Co-ordinator IQAC STC Arts and Commerce College BANHATTI-587311 Dist. Bagalkote

S.T.C. Arts and Commerce College BANHATTI 587 311

೬. ಆತ್ಮನಿವೇದನೆ ಶಿವಾನುಭವ ಸಂಪುಟ -೧೫, ಸಂಚಿಕೆ, ೧, ಪು. ಸಂ.

೭. ಡಾ.ಕಲಬುರ್ಗಿ ಎಂ.ಎಂ. ಫ.ಗು. ಹಳಕಟ್ಟಿ ಶಿವಾನುಭವ ಪತ್ರಿಕೆ, ಪ್ರ ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರ ರುದ್ರಾಕ್ಷಿಮಠ, ಬೆಳಗಾವಿ, ೧೯೯೨ ಅರಿಕೆ -ಪು. ೧

## ಗ್ರಂಥ ಋಣ


೧ ಡಾ. ಹಳಕಟ್ಟಿ ಫಕೀರಪ್ಪನವರು ಎಸ್. ಆರ್. ಗುಂಜಾಳ, ಪ್ರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ವಿರಕ್ತಮಠ, ದೇಶನೂರು, ಬೆಳಗಾವಿ. ೧೯೯೮

೨ ಪತ್ರಕರ್ತರಾಗಿ ಡಾ. ಫ. ಗು. ಹಳಕಟ್ಟಿಯವರು, ಸುರೇಶ ಇಂಗಳಗಿ (ಅಪ್ರಕಟಿತ ಮಹಾಪ್ರಬಂಧ) ಕ. ವಿ. ಧಾರವಾಡ ೨೦೦೬

೩ ಫ ಗು ಹಳಕಟ್ಟಿಯವರ ಪತ್ರಿಕಾ ಸಾಹಿತ್ಯ, ಡಾ. ಪಿ ಕೆ ರಾಠೋಡ, (ಅಪ್ರಕಟಿತ ಮಹಾಪ್ರಬಂಧ) ಕ. ವಿ. ವಿ. ಧಾರವಾಡ ೧೯೯೬

೪ ವಚನ ಗುಮ್ಮಟ, ಡಾ ಬಿ ಎಂ ಪಾಟೀಲ ಪ್ರ ಹಿತಚಿಂತಕ ಪ್ರಕಾಶನ, ಮಹಾಲಿಂಗಪುರ, ೨೦೦೬

೫ ಶಿವಾನುಭವ ಪತ್ರಿಕೆ, ಫ. ಗು. ಹಳಕಟ್ಟಿ ಮತ್ತು ಎಂ. ಎಂ ಕಲಬುರ್ಗಿ, ಪ್ರ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ವಿರಕ್ತಮಠ, ದೇಶನೂರು, ಬೆಳಗಾವಿ. ೧೯೯೬

೬ ವಚನ ಗುಮ್ಮಟ, ಫ. ಗು. ಹಳಕಟ್ಟಿ, ಜಿ. ಎಸ್. ಸಿದ್ಧಲಿಂಗಯ್ಯ, ಪ್ರ ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತು, ಮೈಸೂರು, ೧೯೯೮


Co-ordinator
IQAC
JSS STC Art's and Commerce College.
BANHATTI -587311. Dist. Bagalkote.

PRINCIPAL
STC Arts & Commerce College
BANHATTI ( Dist: Bagalkot)